# सरयू ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**Vol. : 8 Issue : 11 Month - April** 5124/ ಶುಭಕೃತ್ ಸಂವತ್ಸರ ಏಪ್ರಿಲ್ 2022 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಶ್ರೀರಾಮ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ ಹಾಗೂ ಪದವಿ ಪೂರ್ವ ವಿಭಾಗದ ದ್ವಿ.ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

# ದೀಪಪ್ರದಾನ

### ಶ್ರೀರಾಮ ಪ್ರೌಢಶಾಲೆ
11.03.2022







ಮೆಕಾಲೆ ಪ್ರೇರಿತ ಶಿಕ್ಷಣದಿಂದ ಹೊರಬಂದು ನೈಜ ಭಾರತೀಯ ಮೌಲ್ಯಗಳನ್ನು ಬಿತ್ತುವ ಈ ಶಿಕ್ಷಣ ಸಂಸ್ಥೆ ಕಂಡು ಬೆರಗಾಗಿದ್ದೇನೆ.

– ಶ್ರೀ ನೀರಜ್ ಭಂಡಾರಿ, ಮಾಲಕರು
ಸ್ಕೂಲ್ ಬುಕ್ ಕಂಪೆನಿ, ಮಂಗಳೂರು

* ಪ್ರೌಢಶಾಲೆಯ 303, ಪ.ಪೂ ವಿಭಾಗದ 238 ಒಟ್ಟು 541 ವಿದ್ಯಾರ್ಥಿಗಳ ಭಾವನಾತ್ಮಕ ಕಾರ್ಯಕ್ರಮ
* ವೇದಘೋಷದೊಂದಿಗೆ ಭಾರತಮಾತೆಗೆ ಪುಷ್ಪಾರ್ಚನೆ
* ಆರತಿ ಬೆಳಗಿ ತಿಲಕವಿಟ್ಟು ಹಿರಿಯರಿಂದ ಆಶೀರ್ವಾದ
* ವಿದ್ಯಾರ್ಥಿಗಳಿಂದ ಸಂಸ್ಥೆಗೆ ನೆನಪಿನ ಕಾಣಿಕೆ
* ಅನಿಸಿಕೆ ಅನುಭವಗಳ ಭಾವಪೂರ್ಣ ನುಡಿಗಳು
* ಹಿರಿಯರಿಂದ ಮಾರ್ಗದರ್ಶಿ ಮಾತು, ಅತಿಥಿಗಳ ಅನಿಸಿಕೆ.
* ಬಾಲಕರು ಪಂಚೆ, ಬಾಲಕಿಯರು ಸೀರೆಯುಟ್ಟು ಭಾಗಿ
* ವಿದ್ಯಾರ್ಥಿಗಳಿಂದ ಕೊಳಲು, ತಬಲಾ, ಸ್ಯಾಕ್ಸೋಫೋನ್ ವಾದನ
* ಹಿರಿಯ ವಿದ್ಯಾರ್ಥಿಗಳಿಂದ ಕಿರಿಯರಿಗೆ ದೀಪ ಹಸ್ತಾಂತರ
* ವರ್ಣಮಯ ವೇದಿಕೆ
* ಪ್ರೇರಣಾ ಗೀತೆ
* ವಿದ್ಯಾರ್ಥಿಗಳಿಂದಲೇ ಕಾರ್ಯಕ್ರಮ ನಿರ್ವಹಣೆ

### ಶ್ರೀರಾಮ ಪ.ಪೂ ವಿದ್ಯಾಲಯ
26.03.2022




ವಿದ್ಯಾರ್ಥಿಗಳು ತಾವು ಸಾಧನೆಯ ದೀಪದಂತೆ ಪ್ರಜ್ವಲಿಸಲು ತಯಾರಾದರೆ ನಾವು ಪ್ರೋತ್ಸಾಹದ ತೈಲವೆರೆಯಲು ಸಿದ್ಧರಿದ್ದೇವೆ.

– ಡಾ। ಪ್ರಭಾಕರ ಭಟ್, ಕಲ್ಲಡ್ಕ
ಸಂಸ್ಥಾಪಕರು, ಶ್ರೀರಾಮ ವಿದ್ಯಾಕೇಂದ್ರ











## ಪಾದಪೂಜೆ ಮತ್ತು ಕೈತುತ್ತು ಕಾರ್ಯಕ್ರಮ



ಶ್ರೀರಾಮ ಶಿಶುಮಂದಿರ ಮತ್ತು ಪ್ರಾಥಮಿಕ ಶಾಲೆಯ 1 ಮತ್ತು 2ನೇ ತರಗತಿ ವಿದ್ಯಾರ್ಥಿಗಳು ಮತ್ತು ಅವರ ತಾಯಂದಿರನ್ನು ಒಳಗೊಂಡ ಒಂದು ವಿಶಿಷ್ಟ ಕಾರ್ಯಕ್ರಮವಿದು. ಪುಟಾಣಿಗಳ ಅಮ್ಮಂದಿರ ಪಾದಗಳು ಮಾತ್ರ ಕಾಣುವಂತೆ ಪರದೆ ಕಟ್ಟಿ ಬಳಿಕ ಒಬ್ಬೊಬ್ಬರಾಗಿ ಅವರವರ ಅಮ್ಮನನ್ನು ಪಾದಗಳಿಂದಲೇ ಗುರುತಿಸಿದರು. ಪರದೆ ಸರಿಸಿದ ಬಳಿಕ ಪಾದಗಳನ್ನು ತೊಳೆದು, ಹೂ ಹಾಕಿ ಪೂಜಿಸಿ ನಮಸ್ಕರಿಸಿದರು. ತಾಯಂದಿರು ಮಗುವಿಗೆ ಸಿಹಿ ತಿನ್ನಿಸಿ ಆಶೀರ್ವದಿಸಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ತಾಯಂದಿರು ಭಾವನಾತ್ಮಕ ಅನಿಸಿಕೆ ಹೇಳಿದರು. ಪದವಿ ಉಪನ್ಯಾಸಕರಾದ ಭ. ದಿವ್ಯಶ್ರೀ ಕಾರ್ಯಕ್ರಮದ ಮಹತ್ವ ತಿಳಿಸಿದರು. ಅತಿಥಿಯಾಗಿ ವಿಂಧ್ಯಾ ಎಸ್. ರೈ ಭಾಗಿಯಾದರು. ಶ್ರೀಮತಿ ಸುಧಾ ಭಟ್, ಮತ್ತಿತರರು ಉಪಸ್ಥಿತರಿದ್ದರು.



## ಶಿಶುಮಂದಿರ



9.3.2022ರಂದು ಶ್ರೀಗಣೇಶ ಶಿಶುಮಂದಿರ ಬೊಂಡಾಲದ ಪಾಲಕರ ಪ್ರವಾಸವನ್ನು ಉಡುಪಿ ಮಠ, ಜೈನಬಸದಿ, ಮಲ್ಪೆ ಬೀಚ್‌ಗೆ ಆಯೋಜಿಸಲಾಗಿತ್ತು. ಒಟ್ಟು 30 ಜನ ಭಾಗವಹಿಸಿದ್ದರು.



ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಮಕ್ಕಳ ಹೊರಸಂಚಾರವು 21.3.2022ರಂದು ಶ್ರೀ ರಾಜರಾಜೇಶ್ವರಿ ದೇವಸ್ಥಾನ ಪೊಳಲಿ, ಒಡ್ಡೂರು ಫಾರ್ಮ್ಸ್‌ಗೆ ಏರ್ಪಡಿಸಿದ್ದು, 29 ಜನ ಭಾಗವಹಿಸಿದ್ದರು.



20.3.2022 ಶ್ರೀರಾಮ ಶಿಶುಮಂದಿರದ ಪಾಲಕರ ಪ್ರವಾಸ ತೋನ್ಸೆಪಾರ್, ಉಡುಪಿ ಶ್ರೀಕೃಷ್ಣಮಠ, ಕದ್ರಿ ದೇವಸ್ಥಾನಕ್ಕೆ ಏರ್ಪಾಡಾಗಿತ್ತು. 40 ಪಾಲಕರು 18 ಮಕ್ಕಳು ಒಟ್ಟು 58 ಜನ ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ



**ವಿಶ್ವ ಜಲ ದಿನಾಚರಣೆ 22.03.2022** ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಜಲ ದಿನಾಚರಣೆಯನ್ನು ಆಚರಿಸಲಾಯಿತು. ಅಗೋಚರ ಅಂತರ್ಜಲವನ್ನು ಗೋಚರಿಸುವಂತೆ ಮಾಡುವುದು ಎನ್ನುವ ಘೋಷಣೆಯೊಂದಿಗೆ "ಅಟಲ್ ಭೂಜಲ ಜಾಗೃತಿ ಸಪ್ತಾಹ"ಕ್ಕೆ ಚಾಲನೆಯನ್ನು ನೀಡಲಾಯಿತು.



**ಸ್ವಚ್ಛ ಶಾಲಾ ಅಭಿಯಾನ** 28.03.2022 ಪರಿಸರ ಸಂಘದ ವತಿಯಿಂದ ಬಳಸಿ ಬಿಸಾಡುವ ಲೇಖನಿಗಳನ್ನು ಸಂಗ್ರಹಿಸಿ ಪೆಟ್ಟಿಗೆಗೆ ಹಾಕುವ ಸ್ವಚ್ಛ ಶಾಲಾ ಅಭಿಯಾನಕ್ಕೆ ಬಂಟ್ವಾಳ ನಗರ ಠಾಣೆಯ ಕಾನ್‌ಸ್ಟೇಬಲ್‌ಗಳಾದ ಶ್ರೀ ಕೃಷ್ಣ ಕುಲಾಲ್ ಕಡಂಬು ಹಾಗೂ ಶ್ರೀ ಮಾರುತಿ ವೈ ಚಾಲನೆ ನೀಡಿದರು.



**ಸರಸ್ವತಿ ಪೂಜೆ, ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ** 31.3.2022ರಂದು ಈ ವರ್ಷದ ಕೊನೆಯ ಸರಸ್ವತಿ ಪೂಜೆ, 7ನೇ ತರಗತಿಯವರಿಂದ ಭಜನಾ ಕಾರ್ಯಕ್ರಮ ಮತ್ತು ಮಾರ್ಚ್ ಹಾಗೂ ಎಪ್ರಿಲ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು.







**ಬೇಸಿಗೆ ಶಿಬಿರ :** 30.03.2022 ರಂದು ವೇದವ್ಯಾಸ ಧ್ಯಾನಮಂದಿರದಲ್ಲಿ "ಪಲ್ಲವ" ಬೇಸಿಗೆ ಶಿಬಿರವನ್ನು ಕಟ್ಟಡ ಗುತ್ತಿಗೆದಾರರಾದ ಶ್ರೀ ಪುಷ್ಪರಾಜ್ ಶೆಟ್ಟಿಗಾರ್ ಉದ್ಘಾಟಿಸಿದರು. ಶ್ರೀರಾಮ ಪ್ರೌಢ ಶಾಲೆಯ ನಿವೃತ್ತ ಹಿಂದಿ ಶಿಕ್ಷಕರಾದ ಶ್ರೀ ಗೋವಿಂದ ಭಟ್ ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಿದರು. ಶಿಬಿರಕ್ಕೆ ಹೆಸರು ಸೂಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದು, ಆಯ್ಕೆಯಾದ ಹೆಸರು ಸೂಚಿಸಿದವರಿಗೆ ಬಹುಮಾನ ಘೋಷಿಸಲಾಗಿದ್ದು, "ಪಲ್ಲವ" ಎನ್ನುವ ಹೆಸರನ್ನು ಸೂಚಿಸಿದ 6ನೇ ತರಗತಿಯ ಅನನ್ಯಳಿಗೆ ಬಹುಮಾನ ನೀಡಲಾಯಿತು. ವೇದಿಕೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿ ಶ್ರೀ ಶಿವಗಿರಿ ಸತೀಶ ಭಟ್, ಕಲ್ಲಡ್ಕ ರೈತರ ಸೇವಾ ಸಹಕಾರಿ ಸಂಘದ ಶಾಖಾ ವ್ಯವಸ್ಥಾಪಕರಾದ ಶ್ರೀ ಗೋಪಾಲ ಕೆ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಕಗ್ಗ, ದೋಹೆ, ಶ್ಲೋಕ, ಹೂ ಕಟ್ಟುವುದು, ಚಿತ್ರಕಲೆ, ಕ್ರಾಫ್ಟ್, ಕ್ಲೆ ಮಾಡೆಲಿಂಗ್, ರಂಗೋಲಿ ಇತ್ಯಾದಿ ಕಲೆಗಳನ್ನು ಕಲಿಸಲಾಯಿತು.

## ಪ್ರೌಢಶಾಲೆ




ಚಿಣ್ಣರ – ಚಿತ್ತಾರ ಶಿಬಿರದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ರಾಜೇಶ್ ವಿಟ್ಲ ಇವರು ವಿದ್ಯಾರ್ಥಿಗಳಿಗೆ ಜನಪದ ನೃತ್ಯ, ಡೊಳ್ಳು ಕುಣಿತ, ಯಕ್ಷಗಾನ ಕಲೆಗಳ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ತಿಳಿಸಿಕೊಟ್ಟರು. ವಿದ್ಯಾರ್ಥಿಗಳು ಡೊಳ್ಳು ಬಡಿದು, ಜನಪದ ನೃತ್ಯದೊಂದಿಗೆ ಸಂಭ್ರಮಿಸಿದರು.



ಪ್ರೌಢಶಾಲೆಯ 8, 9ನೇ ತರಗತಿಯ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ಬೇಸಿಗೆ ಶಿಬಿರ ಚಿಣ್ಣರ–ಚಿತ್ತಾರವನ್ನು ಗ್ರಾಮವಿಕಾಸದ ಪ್ರಾಂತ ಸಂಯೋಜಕರಾದ ಶ್ರೀ ಪ್ರವೀಣ ಸರಳಾಯ ಉದ್ಘಾಟಿಸಿದರು. ಹಿರಿಯ ಶಿಕ್ಷಕರಾದ ಶ್ರೀ ಕೇಶವ ಆಚಾರ್ಯ, ಸಹಸಂಚಾಲಕರಾದ ಶ್ರೀ ರಮೇಶ್ ಎನ್ ಉಪಸ್ಥಿತರಿದ್ದರು.



ಸ್ಥಾನೀಯ ಬೈಠಕ್: ನೂತನ ಶೈಕ್ಷಣಿಕ ವರ್ಷಕ್ಕೆ ದಾಖಲಾತಿಯ ದೃಷ್ಟಿಯಿಂದ ವಿವಿದೆಡೆಗಳಲ್ಲಿ ನಡೆಸುವ ಸ್ಥಾನೀಯ ಬೈಠಕ್‌ಗಳ ಪೈಕಿ ಮೊದಲ ಬೈಠಕ್ ಬಂಟ್ವಾಳದ ರಾಯಿ ಮಹಾಲಿಂಗೇಶ್ವರ ದೇವಳದ ಆವರಣದಲ್ಲಿ ನಡೆಯಿತು. 76 ಮಂದಿ ಉಪಸ್ಥಿತರಿದ್ದ ಈ ಸಭೆಯಲ್ಲಿ ಡಾ। ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು.

## ಸುಭಾಷಿತ ಮಂಜರಿ

**ಸಹಸಾ ವಿದಧೀತ ನ ಕ್ರಿಯಾಂ**
**ಅವಿವೇಕಃ ಪರಮಾಪದಾಂ ಪದಂ ।**
**ವೃಣತೇ ಹಿ ವಿಮೃಶ್ಯಕಾರಿಣಂ**
**ಗುಣಲುಬ್ಧಾಃ ಸ್ವಯಮೇವ ಸಂಪದಃ ॥**

ಹಿಂದು ಮುಂದು ಆಲೋಚಿಸದೆ ಕೆಲಸಕ್ಕೆ ಕೈಹಾಕಬಾರದು. ಸರಿಯಾಗಿ ತಿಳಿಯದಿರುವಿಕೆಯು ದೊಡ್ಡ ಅಪಾಯವನ್ನುಂಟುಮಾಡುತದೆ. ಒಳ್ಳೆಯ ಗುಣಗಳನ್ನಪೇಕ್ಷಿಸುವ ಸಂಪತ್ತು ವಿಮರ್ಶೆಯಿಂದ ಕೆಲಸಮಾಡುವವನನ್ನು ತಾನಾಗಿ ಸೇರುತ್ತದೆ.

### ಸಂಪಾದಕೀಯ

ಆತ್ಮೀಯ ಓದುಗರೆ,

ವರ್ಷಂಪ್ರತಿ ನಡೆಯುವ ದೀಪಪ್ರದಾನ ಕಾರ್ಯಕ್ರಮದೊಂದಿಗೆ ಆ ಶೈಕ್ಷಣಿಕ ವರ್ಷದ ಚಟುವಟಿಕೆಗಳು ಮುಕ್ತಾಯವಾದಂತೆ. ಆದರೆ ಕಳೆದೆರಡು ವರ್ಷಗಳಲ್ಲಿ ಇವೆಲ್ಲವೂ ಬದಲಾಗಿ ಹೋಯಿತು. ಕ್ರೀಡೋತ್ಸವದಂತಹ ಪ್ರಮುಖ ಕಾರ್ಯಕ್ರಮಗಳಿಲ್ಲದೇ ಹೋಯಿತು. ಪದವಿಯ ವಿಭಾಗದಲ್ಲಿ ಕೇವಲ ಅರ್ಧ ಶೈಕ್ಷಣಿಕ ವರ್ಷವಷ್ಟೇ ಮುಗಿದಿದೆ. ಇವೆಲ್ಲದರ ನಡುವೆ ಮುಂದಿನ ಶೈಕ್ಷಣಿಕ ಚಟುವಟಿಕೆಗಳಿಗೆ ಭರದ ಸಿದ್ಧತೆಯೂ ನಡೆದಿದೆ. ದಾಖಲಾತಿ ಪ್ರಕ್ರಿಯೆ ಆರಂಭಗೊಂಡಿದೆ. ಇವೆಲ್ಲವುಗಳ ವರದಿಯೊಂದಿಗೆ ಸರಯೂ ನಿಮ್ಮ ಕೈಯ್ಯಲ್ಲಿದೆ....

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ಕೊಟ್ರೇಶ್ (ಪ್ರೌಢಶಾಲೆ)
ಲತಾ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಡೂರು


ಕಥನ
33

ಶ್ರೀರಾಮ ವಿದ್ಯಾಕೇಂದ್ರ
# ಕಥನವಾಹಿನಿ
ನಿರೂಪಣೆ
ಡಾ। ಪ್ರಭಾಕರ ಭಟ್, ಕಲ್ಲಡ್ಕ

**(ವಿದ್ಯಾಕೇಂದ್ರದ ಚಿಂತನೆಯ ಮೂಲ, ಹುಟ್ಟು, ಬೆಳವಣಿಗೆ – ಸವಾಲುಗಳ ಕಥೆ)**

## ಪ್ರೌಢಶಾಲಾ ಬೆಳವಣಿಗೆ – 3

ಪ್ರೌಢಶಾಲೆಯ ಆರಂಭ, ಅದಕ್ಕೆ ಸಿಕ್ಕಿದ ಪ್ರತಿಕ್ರಿಯೆ, ಹಾಗೂ ನಿಧಾನವಾಗಿ ಜನ ನಮ್ಮ ಸಂಸ್ಥೆಯನ್ನು ಸ್ವೀಕರಿಸಿದ ಪ್ರೀತಿ–ರೀತಿ–ನೀತಿಗಳು ನಮ್ಮನ್ನು ಇನ್ನಷ್ಟು ಹೊಸ ದಿಕ್ಕಿನಲ್ಲಿ ಆಲೋಚಿಸುವಂತೆ ಮಾಡಿತು.

ಅದಾಗಲೇ 1999 ನೇ ಇಸವಿಯನ್ನು ದಾಟಿ 2000ನೇ ಇಸವಿಗೆ ಕಾಲ ಬದಲಾಗುತ್ತಿದ್ದ ಸನ್ನಿವೇಶ. ಅರ್ಥಾತ್ 20ನೇ ಶತಮಾನ ಮುಗಿದು 21ನೇ ಶತಮಾನಕ್ಕೆ ಪದಾರ್ಪಣೆಯ ಕಾಲಘಟ್ಟ. ಕಾಲದ ಅವಶ್ಯಕತೆಗೆ ತಕ್ಕಂತೆ ಬದಲಾವಣೆ ಅನಿವಾರ್ಯ ಎಂಬಂತೆ ನಿಧಾನವಾಗಿ ಹೊಸ ಹೊಸ ತಂತ್ರಜ್ಞಾನಕ್ಕೆ ಜಗತ್ತು ತೆರೆದುಕೊಳ್ಳುತ್ತಿತ್ತು. ಅದಕ್ಕಾಗಿ ಶಿಕ್ಷಣದೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಕಲಿಸಬೇಕಾದ ಪರಿಸ್ಥಿತಿಯನ್ನು ಅರಿತು ನಾವೂ ಸಿದ್ಧರಾದೆವು. ಈ ಹಿನ್ನೆಲೆಯಲ್ಲಿ ಪ್ರೌಢಶಾಲಾ ವಿಭಾಗದಲ್ಲಿ ಪ್ರತ್ಯೇಕವಾಗಿ ಗಣಕವಿಜ್ಞಾನ ಶಿಕ್ಷಣ ನೀಡಲು ಯೋಜನೆ ಸಿದ್ಧಗೊಂಡಿತು. ಕಣಾದ ಹೆಸರಿನ ಗಣಕ ಶಿಕ್ಷಣ ವಿಭಾಗ ಉದ್ಘಾಟನೆಗೆ ಅಣಿಯಾಯಿತು ಶ್ರೀ ಕ್ಷೇತ್ರ ಒಡಿಯೂರಿನ ಶ್ರೀ ಗುರುದೇವಾನಂದ ಸ್ವಾಮೀಜಿಯವರು ದೀಪ ಪ್ರಜ್ವಲಿಸಿ ಉದ್ಘಾಟಿಸಿದರು. ಈ ಗಣಕ ವಿಭಾಗವನ್ನು ಬೆಂಗಳೂರಿನ ಉದ್ಯಮಿಗಳಾದ ಶ್ರೀ ಲಕ್ಷ್ಮೀನಾರಾಯಣ ಬೈಂದೂರು ಇವರು ಪ್ರಾಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಂಘದ ಹಿರಿಯರಾದ ಶ್ರೀ ಕಜಂಪಾಡಿ ಸುಬ್ರಹ್ಮಣ್ಯ ಭಟ್, ಗೋಪಾಲ ಚೆಟ್ಟಿಯಾರ್ ಮತ್ತು ಮುಂಬೈನ ಶ್ರೀ ರವಿ ಅತ್ತಾವರ ಮುಂತಾದವರು ಭಾಗವಹಿಸಿದ್ದರು.



ಈ ಮೂಲಕ ಪ್ರೌಢಶಾಲೆಯಲ್ಲಿ ಪಠ್ಯದ ಜೊತೆಗೆ ಕಂಪ್ಯೂಟರ್‌ನ ಪ್ರಾಥಮಿಕ ಶಿಕ್ಷಣವನ್ನು ನೀಡಿದ ಮೊತ್ತಮೊದಲ ಶಿಕ್ಷಣ ಸಂಸ್ಥೆ ಇದು ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. (ಬಹುಶಃ ಅಂದಿನ ದಿನಗಳಲ್ಲಿ ಪ್ರೌಢ ಶಾಲಾ ವಿಭಾಗದಲ್ಲಿ ಗಣಕ ಶಿಕ್ಷಣವನ್ನು ಎಲ್ಲಾ ವಿದ್ಯಾರ್ಥಿಗಳಿಗೆ ನೀಡಿದ ತಾಲೂಕಿನ/ಜಿಲ್ಲೆಯ ಮೊಟ್ಟಮೊದಲ ಶಾಲೆಯಾಗಿರಬಹುದು) ಆರಂಭದ ದಿನಗಳಲ್ಲಿ ಸಣ್ಣ ಶುಲ್ಕ ವಿಧಿಸಲಾಗುತ್ತಿತ್ತಾದರೂ ಮುಂದಿನ ದಿನಗಳಲ್ಲಿ ಉಚಿತವಾಗಿಯೇ ಇದು ಎಲ್ಲರಿಗೂ ಲಭ್ಯವಾಯಿತು. ಇಂದು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಏಕಕಾಲಕ್ಕೆ ಉಪಯೋಗಿಸಬಹುದಾಷ್ಟು ದೊಡ್ಡದಾದ ಸುಸಜ್ಜಿತ ಗಣಕ ಕೊಠಡಿಗಳು ನಮ್ಮಲ್ಲಿದೆ.

.....ಮುಂದುವರೆಯುವುದು

**ಪಾದಪೂಜೆ ಮತ್ತು ಕೈತುತ್ತು 18.3.2022**

ಕಲ್ಲಡ್ಕ ಶ್ರೀರಾಮ ಶಿಶುಮಂದಿರದ ಮಾತೆಯರ ಪಾದಪೂಜೆ ಮತ್ತು ಕೈತುತ್ತು ಕಾರ್ಯಕ್ರಮ ಮಧುಕರ ಸಭಾಂಗಣದಲ್ಲಿ ನಡೆಯಿತು.



ಶ್ರೀರಾಮ ಪದವಿ ವಿಭಾಗದ ಉಪನ್ಯಾಸಕರಾದ ಭ॥ ದಿವ್ಯಶ್ರೀ ಮಾತಾಜಿ ಇವರು ಕಾರ್ಯಕ್ರಮದ ಮಹತ್ವವನ್ನು ತಿಳಿಸಿಕೊಟ್ಟರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀಮತಿ ವಿಂದ್ಯಾ.ಎಸ್.ರೈ ಇವರು ಮಾತನಾಡಿ ಇದೊಂದು ಭಾವನಾತ್ಮಕ ಕಾರ್ಯಕ್ರಮ ನಾನು ಇಲ್ಲಿಯವರೆಗೂ ಇಂಥಾ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ ಎಂದು ಹೇಳಿದರು. ತನ್ನ ಮಗು ತಮ್ಮ ಪಾದವನ್ನು ಹುಡುಕಿ ಪಾದಪೂಜೆ ಮಾಡಿರುವುದು ನಮ್ಮ ಸೌಭಾಗ್ಯ ಎಂದು ಮಾತೆಯರು ತಮ್ಮ ಅನುಭವವನ್ನು ಹಂಚಿಕೊಂಡರು.

**ವಾರ್ಷಿಕೋತ್ಸವ** 31.3.2022



ಶಿಶುಮಂದಿರದ ಪುಟಾಣಿಗಳ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಮಧುಕರ ಸಭಾಂಗಣದಲ್ಲಿ ನಡೆಸಲಾಯಿತು. ಪುಟಾಣಿಗಳ ಸಾಂಸ್ಕೃತಿಕ ಕಾರ್ಯಕ್ರಮದ ನಂತರ ಮಾರ್ಚ್, ಏಪ್ರೀಲ್, ಮೇ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಆಡಳಿತ ಮಂಡಳಿಯ ಮಾತೆಯರು ಮಕ್ಕಳಿಗೆ ಆರತಿ ಬೆಳಗಿ, ತಿಲಕ ಇಟ್ಟು, ಅಕ್ಷತೆ ಹಾಕಿ, ಸಿಹಿ ನೀಡಿ ಶುಭಹಾರೈಸಿದರು. ನಂತರ ಸಭಾ ಕಾರ್ಯಕ್ರಮ ನಡೆಯಿತು. ಡಾ॥ಪ್ರಭಾಕರ ಭಟ್ ಪಾಲಕರಿಗೆ ಹಿತವಚನಗಳನ್ನಾಡಿದರು. ವೇದಿಕೆಯಲ್ಲಿ ವಿದ್ಯಾಕೇಂದ್ರದ ಸಂಚಾಲಕರಾದ ವಸಂತ ಮಾಧವ ಶ್ರೀಮಾನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 300 ಮಂದಿ ಭಾಗವಹಿಸಿದ್ದರು. ಶ್ರೀಮತಿ ಮಧುರಾ ಸ್ವಾಗತಿಸಿ, ಶ್ರೀಮತಿ ಲತಾ ವಂದಿಸಿ, ಶ್ರೀಮತಿ ಮಂಜುಳಾ ನಿರೂಪಿಸಿದರು.

**ಪಾದಪೂಜೆ ಮತ್ತು ಕೈತುತ್ತು** 05.03.2022

ಹೆತ್ತವರ ಪಾದಪೂಜೆ ಹಾಗೂ ಕೈತುತ್ತು ಕಾರ್ಯಕ್ರಮ ನಡೆಯಿತು. 1ನೇ ಮತ್ತು 2ನೇ ತರಗತಿಯವರ ಪೋಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಶ್ರೀರಾಮ ಪ್ರಾಥಮಿಕ ವಿಭಾಗದ ಸಂಸ್ಕೃತ ಅಧ್ಯಾಪಕರದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಪಾದ ಪೂಜೆಯ ಮಹತ್ವವನ್ನು ತಿಳಿಸಿದರು.

ವೇದಿಕೆಯಲ್ಲಿ ಶಾಲಾ ಪೋಷಕರಾದ ಶ್ರೀಮತಿ ಅಕ್ಷತಾ, ಶ್ರೀಮತಿ ಕವಿತ, ಶ್ರೀಮತಿ ಮಮತ, ಶ್ರೀಮತಿ ಸವಿತ, ಶ್ರೀಮತಿ ಜಯಶ್ರೀ, ಶ್ರೀಮತಿ ಹೇಮಲತಾ ಹಾಗೂ ಮುಖ್ಯ ಶಿಕ್ಷಕರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಸೀತಾರಸೋಯಿ ಭೇಟಿ**



15.3.2022ರಂದು ಪ್ರಾಥಮಿಕ ವಿಭಾಗದ ಎಲ್ಲಾ ಅಧ್ಯಾಪಕರು ನೂತನವಾಗಿ ನಿರ್ಮಿಸಿದ ಸೀತಾರಸೋಯಿಗೆ ಭೇಟಿ ನೀಡಿದರು. ಕಟ್ಟಡ ಗುತ್ತಿಗೆದಾರರಾದ ಶ್ರೀ ಪುಷ್ಪರಾಜ್ ಶೆಟ್ಟಿಗಾರ್ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಮುಖ್ಯಶಿಕ್ಷಕರು ಹಾಗೂ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಪಿ.ಕೆ. ಪದ್ಮನಾಭ ಜೊತೆಗಿದ್ದರು.

**ಬೈಠಕ್**

25.3.2022ರಂದು ಅಧ್ಯಾಪಕರ ಬೈಠಕ್ ವೇದವ್ಯಾಸ ಧ್ಯಾನಮಂದಿರದಲ್ಲಿ ಮುಖ್ಯ ಶಿಕ್ಷಕರ ಮಾರ್ಗದರ್ಶನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಎಲ್ಲ ಅಧ್ಯಾಪಕರು ಉಪಸ್ಥಿತರಿದ್ದರು.

## ಪ್ರೌಢಶಾಲೆ

**ದೀಪ ಪ್ರದಾನ 11.03.2022**

ಡಾ। ಪ್ರಭಾಕರ್ ಭಟ್ "ಶ್ರೀರಾಮ ವಿದ್ಯಾಕೇಂದ್ರ ಕಳೆದ 42 ವರ್ಷಗಳಿಂದ ಕೆಲಸ ಮಾಡುತ್ತಾ ಇದೀಗ ಶಿಕ್ಷಣ ಕ್ಷೇತ್ರದಲ್ಲಿ "ಶ್ರೀರಾಮ ಬ್ರಾಂಡ್" ಎಂದೇ ಖ್ಯಾತಿ ಗಳಿಸಿದೆ ಅದರ ಮೌಲ್ಯವನ್ನು ಹೆಚ್ಚಿಸುವಲ್ಲಿ ನಿಮ್ಮೆಲ್ಲರ ಪಾತ್ರ ಪ್ರಮುಖವಾದದ್ದು ಈಗಿನ ಬಾಹ್ಯ ಆಕರ್ಷಣೆಗಳಿಂದ ಜಾಗೃತರಾಗಿ ಉತ್ತಮ ಸಂಸ್ಕಾರ ಮತ್ತು ಮಾನವೀಯ ಮೌಲ್ಯದ ಜೀವನ ರೂಪಿಸಿಕೊಳ್ಳಿ" ಎಂದು ಶುಭ ಹಾರೈಸಿದರು.

ಆದಿತ್ಯ ಕೃಷ್ಣ, ಆಯಿಷಾ ರಫಿಯಾ, ವರಲಕ್ಷ್ಮೀ, ಜಯಸೂರ್ಯ, ವಿಜಯಲಕ್ಷ್ಮೀ, ಚೈತನ್ಯ, ಸ್ವಾತಿ, ಅನಿಸಿಕೆ ವ್ಯಕ್ತಪಡಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಾಂಭವಿ ಮಾತಾಜಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಧೈರ್ಯ ತುಂಬಿದರು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಉದ್ಯಮಿ ಶ್ರೀ ವೆಂಕಟೇಶ (ಕಾಕುಡಾ ಇನ್ಫ್ರಾಸ್ಟ್ರಕ್ಚರ್ ಕಂಪನಿಯ ಮಾಲಕರು), ಶ್ರೀ ನೀರಜ್ ಭಂಡಾರಿ (ಸ್ಕೂಲ್ ಬುಕ್ ಕಂಪನಿ ಮಂಗಳೂರು ಇದರ ಮಾಲಕರು), ಶ್ರೀಮತಿ ಚೈತ್ರ ಹೆಗಡೆ (ಕೆನರಾ ಎಕ್ಸಲೆನ್ಸಿ ಕಾಲೇಜ್ ಕುಮಟಾ ಇಲ್ಲಿನ ಉಪನ್ಯಾಸಕಿ), ಶ್ರೀ ಲಕ್ಷ್ಮೀನಾರಾಯಣ ಪರಾಡ್ಕರ್ (ಪ್ರಗತಿಪರ ಮತ್ತು ಸಾವಯವ ಕೃಷಿಕರು ಬಂಟ್ವಾಳ), ಶ್ರೀವಿಜಯ ಭಂಡಾರಿ ಮಂಗಳೂರು ಬಿಜೆಪಿ ಬೂತ್ ಅಧ್ಯಕ್ಷರು, ಶ್ರೀ ಪ್ರಭಾಕರ ಪ್ರಭು, ಶ್ರೀ ಧೀರಜ್ ನಾಯಕ್, ಶ್ರೀ ವಸಂತಮಾಧವ, ಶ್ರೀ ರಮೇಶ್ ಎನ್. ಹಾಗೂ ಡಾ. ಕಮಲಾ ಪ್ರಭಾಕರ್ ಭಟ್, ಶ್ರೀ ಪದ್ಮನಾಭ ಕೊಟ್ಟಾರಿ ಉಪಸ್ಥಿತರಿದ್ದರು.

ವಿದ್ಯಾರ್ಥಿ ಅನುಷಾ ಪ್ರೇರಣಾ ಗೀತೆ ಹಾಡಿದಳು, ಚಿನ್ಮಯ್ ಕಾರ್ಯಕ್ರಮ ನಿರೂಪಿಸಿ, ಶ್ರೀನಿವಾಸ ಸ್ವಾಗತಿಸಿ, ಮನಸ್ವಿ ವಂದನೆಗೈದಳು. ಕಾರ್ಯಕ್ರಮ ಉತ್ತಮವಾಗಿ ಮೂಡಿಬರುವಲ್ಲಿ ಅಧ್ಯಾಪಕರ ಸಹಕಾರವಿತ್ತು.

ವಿದ್ಯಾರ್ಥಿಗಳಾದ ಪ್ರೇರಣಾ ಇವರ ಸ್ಯಾಕ್ಸೋಫೋನ್, ಕಾರ್ತಿಕ್‌ನ ಕೊಳಲು ವಾದನ ಹಾಗೂ ಆತ್ರೇಯ ಇವರ ತಬಲಾವಾದನ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿತು.

**"ಚಿಣ್ಣರ ಚಿತ್ತಾರ" ಬೇಸಿಗೆ ಶಿಬಿರ 28.03.2022** ವನ್ನು ಆಯೋಜಿಸಲಾಗಿದ್ದು ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಸೂಕ್ತ ಪ್ರತಿಭೆಯನ್ನು ಹೊರತೆಗೆಯುವ ಪ್ರಯತ್ನವನ್ನು ಈ ಶಿಬಿರದ ಮೂಲಕ ಮಾಡಲಾಯಿತು.

ಸಂಗೀತ, ಯೋಗ, ಕಲೆ, ಬರವಣಿಗೆ, ಆಟ, ವ್ಯಾಯಾಮ, ವಿಜ್ಞಾನ, ರಸಪ್ರಶ್ನೆ, ರಂಗೋಲಿ,ಭಾಷಣ ಕಲೆ ಹೀಗೆ ಬದುಕಿನ ಸಮಗ್ರ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಈ ಶಿಬಿರ.

**ಶಿಬಿರದ ಉದ್ಘಾಟನೆ:**

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಪ್ರಾಂತ ಗ್ರಾಮ ವಿಕಾಸ ಸಂಯೋಜಕರು ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರವೀಣ್ ಸರಳಾಯ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಹಿರಿಯ ಶಾಖಾ ವ್ಯವಸ್ಥಾಪಕರು, ಬ್ಯಾಂಕ್ ಆಫ್ ಬರೋಡ ಕಲ್ಲಡ್ಕ ಶಾಖೆ, ಸದಾಶಿವ ಆಚಾರ್ಯ, ಸಹಸಂಚಾಲಕರಾದ ಶ್ರೀ ರಮೇಶ್ ಎನ್. ಪ್ರೌಢಶಾಲೆಯ ಹಿರಿಯ ಗುರುಗಳಾದ ಕೇಶವ ಆಚಾರ್ಯ ಶ್ರೀಮಾನ್ ಉಪಸ್ಥಿತರಿದ್ದರು.

* ಆರ್ಟ್ ಆಫ್ ಲಿವಿಂಗ್ ಇದರ ಶಿಕ್ಷಕರಿಂದ ವಿಶೇಷ ಭಜನಾ ತರಬೇತಿ, ಕಾರ್ಯಕ್ರಮದಲ್ಲಿ ನಿವೃತ್ತ ಬ್ಯಾಂಕ್ ಅಧಿಕಾರಿ ಕೆ ರಾಜಾರಾಮ ಐತ್ತಾರ, ಮಚ್ಚೆ ಆರ್ಟ್ಸ್ ಕಲ್ಲಡ್ಕ ಇದರ ಮಚ್ಚೇಂದ್ರನಾಥ್, ಸ್ವರ್ಣ ಜ್ಯುವೆಲ್ಲರ್, ಸೂರಿಕುಮೇರು ಇದರ

ಮಾಲಕರಾದ ಓಂ ಪ್ರಕಾಶ್, ಇವರು ಮಕ್ಕಳಿಗೆ ಭಜನಾ ಅಭ್ಯಾಸ ಮಾಡಿಸಿದರು.

* ಪದವಿ ವಿಭಾಗದ ಪ್ರಾಂಶುಪಾಲರಾದ ಕೃಷ್ಣಪ್ರಸಾದ ಅಖಂಡ ಭಾರತದ ಪರಿಚಯವನ್ನು ಮಕ್ಕಳಿಗೆ ತಿಳಿಸಿ ಹೇಳಿದರು.

* ಶ್ರೀ ಸುರೇಶ್ ಪರ್ಕಳ ಇವರು ವಿದ್ಯಾರ್ಥಿಗಳಿಗೆ ರಾಮಾಯಣದ ಪ್ರಸಂಗಗಳು, ಮತ್ತು ಅದರಿಂದ ನಮ್ಮ ಜೀವನಕ್ಕೆ ಅಳವಡಿಸಬೇಕಾದ ಅಂಶಗಳನ್ನು ತಿಳಿಸಿದರು ಹಾಗೂ ರಾಮಾಯಣಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು.

* ಹಿಂದೂ ಜಾಗರಣ ವೇದಿಕೆ ಮಂಗಳೂರು ವಿಭಾಗ, ಮತ್ತು ಸುರಕ್ಷಾ ಸಂಯೋಜಕ, ಹಾಗೂ ಯಕ್ಷಗಾನ ಕಲಾವಿದರು ಶ್ರೀ ಗಣರಾಜ್ ಭಟ್ ಕೆದಿಲ ರಾಮನು ನಡೆದಂತೆ ನಡೆ, ಕೃಷ್ಣನು ನುಡಿ–ದಂತೆ ನಡೆ ಎಂಬ ವಿಚಾರವನ್ನು ಅರ್ಥೈಸಿದರು.

* ಶ್ರೀ ಮಹೇಶ್ವರ ಭಟ್ ಇವರು ಈ ಕಲಿಯುಗದಲ್ಲಿ ಸನಾತನ ಧರ್ಮದ ಮಹಾಗ್ರಂಥವಾದ ರಾಮಾಯಣದ ಪ್ರಸಂಗಗಳು ಮತ್ತು ನಮ್ಮ ಜೀವನದಲ್ಲಿ ಅದರ ಅಳವಡಿಕೆಯ ಕುರಿತಾಗಿ ಬಹಳ ಅರ್ಥಪೂರ್ಣವಾಗಿ ತಿಳಿಸಿದರು.

**29.03.2022 ಎರಡನೇ ದಿನ**

**ದೇಶೀಯ ಆಟಗಳ ಅಭ್ಯಾಸ**

* ಜಿಲ್ಲಾ ಸಹ ಶಾರೀರಿಕ್ ಪ್ರಮುಖ ಶ್ರೀ ಗಜೇಶ್, ಜಿಲ್ಲಾ ಸಹ ಶಾರೀರಿಕ್ ಪ್ರಮುಖ್ ಶ್ರೀ ಸುಧೀಂದ್ರ ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಾಂಭವಿ ಮಾತಾಜಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬೌದ್ಧಿಕ್ ಆಟಗಳನ್ನು ನಡೆಸಲಾಯಿತು * ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ| ಪ್ರಭಾಕರ್ ಭಟ್ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರ ನಡೆದು ಬಂದ ದಾರಿ, ತಮ್ಮತನವನ್ನು ತರುವಂತ ವಿಶಿಷ್ಟ ಸಂಸ್ಥೆಯೇ ಶ್ರೀರಾಮ ವಿದ್ಯಾಸಂಸ್ಥೆ ಆಗಿದೆ ಎಂದು ತಿಳಿಸಿದರು.

* ಪತ್ರಿಕಾ ವರದಿಗಾರರಾದ ಮೌನೇಶ್ ವಿಶ್ವಕರ್ಮ ಇವರಿಂದ ನಾಟಕ ತರಬೇತಿ, ಶ್ರೀಮತಿ ಗೀತಾ ಸಾರಡ್ಕ ಇವರು ಗೀತ ಗಾಯನದಲ್ಲಿ ಭಾವಗೀತೆ ಜನಪದ ಗೀತೆಯ ಬಗ್ಗೆ ತಿಳಿಸಿಕೊಟ್ಟರು. ಶ್ರೀರಾಮ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ರಂಗೋಲಿ ಹಾಕುವ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

* ಸ್ವಾತಂತ್ರ್ಯ ಹೋರಾಟಗಾರರ ಕಿಚ್ಚಿನ ಕಥೆಯನ್ನು ಮಕ್ಕಳು ದೃಶ್ಯ ಮಾಧ್ಯಮದ ಮೂಲಕ ವೀಕ್ಷಿಸಿದರು. ಉಮೇಶ್ ಕುಲಕರ್ಣಿಯವರು ಗೋವಿನ ಮಹತ್ವದ ಬಗ್ಗೆ ತಿಳಿಸಿಕೊಟ್ಟರು.

* ಪ್ರಾಥಮಿಕ ವಿಭಾಗದ ರವಿರಾಜ್ ಶ್ರೀಮಾನ್ ಹಾಗೂ ಪದವಿ ಪೂರ್ವ ವಿಭಾಗದ ಅಶೋಕ್ ಶ್ರೀಮಾನ್ ಮಹಾಭಾರತದ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕಥೆಯನ್ನು ವಿವರವಾಗಿ ಹೇಳಿದರು.

**30.03.2022 ಮೂರನೇ ದಿನ**

* ಕುಣಿತ ಭಜನೆಯನ್ನು ಶ್ರೀ ಯೋಗೀಶ್, ಶ್ರೀ ಕೃಷ್ಣಭಟ್ ಗಿಲ್ಕಿಂಜ ಹಾಗೂ ವಾಸುದೇವ ಪ್ರಭು ಇವರು ಮನಮುದ್ದಿನ ಕುರಿತಾಗಿ ಸಮಗ್ರ ಮಾಹಿತಿಯನ್ನು ನೀಡಿದರು.

* ನೃತ್ಯ, ಹಾಡುಗಾರಿಕೆ, ಮಾತುಗಾರಿಕೆ, ವೇಷ ಭೂಷಣಗಳನ್ನು ಒಳಗೊಂಡ ಯಕ್ಷಗಾನದ ಬಗ್ಗೆ ಶ್ರೀ ಪ್ರಭಾಕರ ಯಕ್ಷಗಾನ ಕಲಾವಿದರು ಅಚ್ಚುಕಟ್ಟಾಗಿ ಸ್ವವಿವರವಾಗಿ ತಿಳಿಸಿದರು.

* ಜಾನಪದ ಕಲಾವಿದರು ಜನಾರ್ದನ ಸುಳ್ಯ ಇವರು ಕೋಲಾಟ ಕಲೆಯ ಬಗ್ಗೆ ತರಬೇತಿಯನ್ನು ನೀಡಿದರು.

* ದಾಸರ ಸಂಕೀರ್ತನೆ ಕಾರ್ಯಕ್ರಮದಲ್ಲಿ ಭಜನೆಯ ಮಹತ್ವವನ್ನು ಶ್ರೀಯುತ ರಾಮಕೃಷ್ಣ ಕಾಟುಕುಕ್ಕೆಯವರು ತಿಳಿಸಿದರು.

**01.04.2022 ನಾಲ್ಕನೇ ದಿನ**

ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನೆ ಕಾರ್ಯಕ್ರಮದಲ್ಲಿ ಸರಕಾರಿ ಪ್ರೌಢಶಾಲೆ ನಾರ್ಶ ಮೈದಾನ ಇಲ್ಲಿಯ ಸಹಶಿಕ್ಷಕರು ಶ್ರೀ ಗೋಪಾಲಕೃಷ್ಣ ನೇರಳಕಟ್ಟೆ, ಹಾಗೂ ಪ್ರೌಢಶಾಲೆಯ ಶಿಕ್ಷಕರಾದ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಅಕ್ಷತಾ ಲಕ್ಷ್ಮೀ ನಿರೂಪಿಸಿ, ಚಿನ್ಮಯಿ ಸ್ವಾಗತಿಸಿ, ಚೇತನಾ ವಂದಿಸಿದರು.

## ಪದವಿ ಪೂರ್ವ

ದೀಪ ಪ್ರದಾನ: ದಿನಾಂಕ 26.03. 22ರಂದು ಶ್ರೀರಾಮ ಪದವಿಪೂರ್ವ ವಿದ್ಯಾಲಯದಲ್ಲಿ ನಡೆದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ದೀಪ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ| ಪ್ರಭಾಕರ್ ಭಟ್ ಕಲ್ಲಡ್ಕ ಅಧ್ಯಕ್ಷರು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇವರು ಸಂಸ್ಕಾರಯುತ ಜೀವನದ ಪದ್ಧತಿಯೇ ಭಾರತದ ಧರ್ಮ. ಭಾರತೀಯ ಸಾಧನೆಯನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಾದವರು ಸಾಧನೆ ಎಂಬ ಹಾದಿಯಲ್ಲಿ ದೀಪದಂತೆ ಪ್ರಜ್ವಲಿಸಲು ಸಿದ್ಧರಾದರೆ ಎಣ್ಣೆ ಎಂಬ ಪ್ರೋತ್ಸಾಹವನ್ನು ನಾವು ತುಂಬುತ್ತೇವೆ ಎಂದು ವಿದ್ಯಾರ್ಥಿಗಳನ್ನುದ್ದೇಶಿಸಿ ನುಡಿದರು. ಮುಖ್ಯ ಅಭ್ಯಾಗತರಾಗಿ ಆಗಮಿಸಿರುವ ಶ್ರೀ ಕೆ.ವಿ ರತ್ನಾಕರ ರೆಡ್ಡಿ ಇನ್ಫಾ ಸಪೋರ್ಟ್ ಎಂಜಿನಿಯರಿಂಗ್ ಕನ್ಸಲ್ಟೆಂಟ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು .ಇವರು ಮನುಷ್ಯ ಬೆಳೆಯುವುದು ಅವನ ವೃತ್ತಿಯಿಂದಲ್ಲ ವ್ಯಕ್ತಿತ್ವದಿಂದ ವಿದ್ಯಾರ್ಥಿಗಳಿಗೆ ಅಂಕಗಳ ಜೊತೆಗೆ ಜೀವನ ಮೌಲ್ಯಗಳು ಅವಶ್ಯಕ. ನಿಮ್ಮ ಜೀವನ ಮೌಲ್ಯಯುತವಾಗಿ ಸಾಗಲಿ ಎಂದು ಶುಭ ಹಾರೈಸಿದರು. ವಿದ್ಯಾರ್ಥಿಗಳಾದ ಮೇಘನಾ, ವರ್ಷಿಣಿ, ವಿಸ್ಮಿತ, ವಂಶಿ, ಸರ್ವೇಶ್ ಮತ್ತು ಇಂಗ್ಲಿಷ್ ಉಪನ್ಯಾಸಕಿಯಾದ ಶ್ರೀಮತಿ ಸವಿತಾ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಶ್ರೀ ಸಂತೋಷ್ ಕುಮಾರ್ ರಾವ್ ಬಂಟ್ವಾಳ, ಶ್ರೀ ಮುದ್ದು ರಂಗಯ್ಯ ಉದ್ಯಮಿಗಳು ಬೆಂಗಳೂರು, ಡಾ. ಕಮಲ ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ಪ. ಪೂ. ವಿಭಾಗದ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಥಮ ಪಿಯುಸಿ ವಿದ್ಯಾರ್ಥಿಗಳಾದ ಕುಮಾರಿ ವೈಷ್ಣವಿ ಅತಿಥಿಗಳನ್ನು ಸ್ವಾಗತಿಸಿ, ಹೃಷಿಕೇಶ್ ವಂದಿಸಿದರು. ಕುಮಾರಿ ವಿಧಿಶಾ ಕಾರ್ಯಕ್ರಮವನ್ನು ನಿರೂಪಿಸಿದರು.

## ಪದವಿ

**ಪ್ರಬೋಧ ವಾಣಿಜ್ಯ ಸಂಘದಿಂದ ಪಾನ್ ಕಾರ್ಡ್ ಅಭಿಯಾನ 02.03.22**



ಪ್ರಬೋಧ ವಾಣಿಜ್ಯ ಸಂಘ ವತಿಯಿಂದ ಪಾನ್ ಕಾರ್ಡ್ ಅಭಿಯಾನವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಮಾಹಿತಿ ತಂತ್ರಜ್ಞಾನ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಕು. ವರ್ಷಿತಾ ಇವರು ದೀಪಪ್ರಜ್ವಲಿಸುವುದರ ಮೂಲಕ ಚಾಲನೆ ನೀಡಿದರು. ಪಾನ್ ಕಾರ್ಡ್‌ಗೆ ಸಂಬಂಧಿಸಿದ ಅಗತ್ಯ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಐ.ಕ್ಯು.ಎ.ಸಿ ಯ ಸಂಯೋಜಕಿಯಾದ ಶ್ರೀಮತಿ ಸುಕನ್ಯಾ ಮಾತಾಜಿ ವಹಿಸಿದ್ದರು. ವೇದಿಕೆಯಲ್ಲಿ ವಾಣಿಜ್ಯ ಸಂಘದ, ಮಾರ್ಗದರ್ಶಕರಾದ ಶ್ರೀ ರಂಜಿತ್ ಶ್ರೀಮಾನ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿಗಳಾದ ತೃಪ್ತಿ ಸ್ವಾಗತಿಸಿ, ಕೀರ್ತಿ ನಿರೂಪಿಸಿ ವಂದಿಸಿದರು.

**ಕ್ಯಾನ್ಸರ್ ಖಾಯಿಲೆ ಕುರಿತ ಸಮಾವೇಶದಲ್ಲಿ ವಿದ್ಯಾರ್ಥಿಗಳು ಭಾಗಿ 03.03.22**

ಮಂಗಳೂರು ವಿಶ್ವವಿದ್ಯಾನಿಲಯದ ಯುವ ರೆಡ್ ಕ್ರಾಸ್ ಘಟಕದ ವತಿಯಿಂದ ಸಹ್ಯಾದ್ರಿ ಕಾಲೇಜು ಅಡ್ಯಾರ್‌ನಲ್ಲಿ ಕ್ಯಾನ್ಸರ್ ಖಾಯಿಲೆ ಕುರಿತ ಜಾಗೃತಿ ಸಮಾವೇಶದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಸವಿತಾ ತೃತೀಯ ಬಿಎಸ್ಸಿ, ಚೇತನ್ ದ್ವಿತೀಯ ಬಿಕಾಂ, ಲಿತಿನ್ ರಾಜ್ ದ್ವಿತೀಯ ಬಿಕಾಂ, ಅರುಂಧತಿ ದ್ವಿತೀಯ ಬಿಕಾಂ, ವಂದನ ದ್ವಿತೀಯ ಬಿಕಾಂ, ಡಯೋ ಬೈಟ್ಮೀ ಡಿಂಕರ್ ದ್ವಿತೀಯ ಬಿ.ಎ ಭಾಗವಹಿಸಿದ್ದರು.

**ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಭಾಗಿ 04.03.22**

ಮಂಗಳೂರು ವಿಶ್ವವಿದ್ಯಾನಿಲಯದ ಯುವ ರೆಡ್ ಕ್ರಾಸ್ ಘಟಕದ ವತಿಯಿಂದ ಯೇನಪೋಯ

ಮೆಡಿಕಲ್ ಕಾಲೇಜು ದೇರಳಕಟ್ಟೆ ಇಲ್ಲಿ ರಾಜ್ಯಮಟ್ಟದ ಕ್ಯಾನ್ಸರ್ ಖಾಯಿಲೆ ಕುರಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಯುವ ರೆಡ್ ಕ್ರಾಸ್ ಘಟಕದ ಸಂಯೋಜಕಿ ಚಂದ್ರಕಲಾ ಮಾತಾಜಿ ಭಾಗವಹಿಸಿದ್ದರು.

**ವಿಶೇಷ ಶಿಬಿರದಲ್ಲಿ ಭಾಗಿ 06.03.22**



22/02/2022 ರಿಂದ 27/02/2022 ವರೆಗೆ ಧಾರವಾಡದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರೀಯ ವಿಶೇಷ ಶಿಬಿರದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಥಮ ವಾಣಿಜ್ಯ ವಿಭಾಗದ ವಿದ್ಯಾರ್ಥಿ ಸಂಪತ್ ಕುಮಾರ್ ಭಾಗವಹಿಸಿ ಸಂಸ್ಥೆಗೆ ಗೌರವ ತಂದು-ಕೊಟ್ಟರು.

**ತುಳು ಮಿನದನ –2022 08.03.22**

ತುಳುಕೂಟ ಉಡುಪಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಎಂಪಿಎಂ ಸರಕಾರಿ ಪ್ರಥಮ ದರ್ಜೆ ಕಾಲೇಜು ಕಾರ್ಕಳದಲ್ಲಿ ನಡೆದ ತುಳು ಮಿನದನ –2022 ರಲ್ಲಿ ನಮ್ಮ ಕಾಲೇಜಿನ 20 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**workshopನಲ್ಲಿ ಭಾಗಿ 11.03.22**

ಮಂಗಳೂರಿನಲ್ಲಿ ನಡೆದ ಇಂಗ್ಲಿಷ್ workshopನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾದ ಶ್ರೀಮತಿ ಶ್ರೀದೇವಿ ಮಾತಾಜಿ ಭಾಗವಹಿಸಿದ್ದರು.

**ಕೆಮ್ ಫುಡ್ 11.03.22**




ಪ್ರಭವ ವಿಜ್ಞಾನ ಸಂಘ ಮತ್ತು ರಸಾಯನ ಶಾಸ್ತ್ರ ವಿಭಾಗದಿಂದ ಕೆಮ್ ಫುಡ್ (Chemistry behind food) ಸ್ಪರ್ಧೆಯನ್ನು ಆಯೋಜಿಸಲಾಯಿತು. ಒಟ್ಟು 15 ತಂಡ ಭಾಗವಹಿಸಿತ್ತು.

**ಕಾಲೇಜು ಭೇಟಿ 12.03.22**

ಶ್ರೀರಾಮ ಪದವಿ ವಿಭಾಗದಿಂದ ಶ್ರೀರಾಮಚಂದ್ರ ಪದವಿ ಪೂರ್ವ ಕಾಲೇಜು ಪೆರ್ನೆ ಗೆ ಭೇಟಿ ನೀಡಿ ವಿಭಾಗವಾರು ಮಾಹಿತಿ ನೀಡಲಾಯಿತು. ಕನ್ನಡ ಉಪನ್ಯಾಸಕರಾದ ಯತಿರಾಜ್ ಪಿ, ವಾಣಿಜ್ಯಶಾಸ್ತ್ರ ಉಪನ್ಯಾಸಕ ರಂಜಿತ್ ಎಂ, ಗಣಕ ವಿಜ್ಞಾನ ಉಪನ್ಯಾಸಕ ಶ್ರೀಮತಿ ಧನ್ಯಶ್ರೀ ಉಪಸ್ಥಿತರಿದ್ದರು. ಪೆರ್ನೆ ಕಾಲೇಜ್ ನ ವಾಣಿಜ್ಯ ವಿಭಾಗದ 57 ಮತ್ತು ಕಲಾ ವಿಭಾಗದ 41 ವಿದ್ಯಾರ್ಥಿಗಳನ್ನು ಮಾತನಾಡಿಸಲಾಯಿತು.

**ಕಾಲೇಜು ಭೇಟಿ 11.03.22**



ಶ್ರೀರಾಮ ಪದವಿ ಕಾಲೇಜಿನಿಂದ ವಿಠ್ಠಲ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ, ಪದವಿ ವಿಭಾಗದ ವಿಶೇಷ ಸವಲತ್ತು ಮತ್ತು ಅವಕಾಶಗಳನ್ನು ತಿಳಿಸಿಕೊಡಲಾಯಿತು.ಕನ್ನಡ ಉಪನ್ಯಾಸಕರಾದ ಯತಿರಾಜ್ ಪಿ, ವಾಣಿಜ್ಯಶಾಸ್ತ್ರ ಉಪನ್ಯಾಸಕರಾದ ರಂಜಿತ್ ಎಂ, ಗಣಕ ವಿಜ್ಞಾನ ಉಪನ್ಯಾಸಕಿ ಶ್ರೀಮತಿ ಧನ್ಯಶ್ರೀ ಉಪಸ್ಥಿತರಿದ್ದರು. 4 ತರಗತಿಗಳ 182 ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

**ಹೋಳಿ ಹಬ್ಬ ಆಚರಣೆ 18.03.22**



ಜಾತಿ ಮತಗಳ ಭೇದವಿಲ್ಲದೆ ಆಚರಿಸುವ ಬಣ್ಣಗಳ ಹಬ್ಬ ಹೋಳಿಗೆ ತನ್ನದೇ ಆದ ಆಚಾರ ಸಂಪ್ರದಾಯವಿದೆ. ಇಂತಹ ಬಾಂಧವ್ಯ ಸಾರುವ ಹಬ್ಬವನ್ನು ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಪರಸ್ಪರ ಬಣ್ಣಗಳನ್ನು ಹಚ್ಚಿಕೊಳ್ಳುವ ಮೂಲಕ ಆಚರಿಸಿಕೊಂಡರು.

**ಎ.ಬಿ.ವಿ.ಪಿ ಅಧಿವೇಶನ 19.03.22**

ಉಜಿರೆಯಲ್ಲಿ ನಡೆದ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ನ 3ನೇ ರಾಜ್ಯ ಅಧಿವೇಶನದಲ್ಲಿ ನಮ್ಮ ಕಾಲೇಜಿನಿಂದ 11 ವಿದ್ಯಾರ್ಥಿಗಳು ಹಾಗೂ ದೀಕ್ಷಿತಾ ಮಾತಾಜಿ ಭಾಗವಹಿಸಿರುತ್ತಾರೆ.

**ಪ್ರಶಸ್ತಿ ಪ್ರದಾನ. 23.03.22**



ದಿನಾಂಕ 14.02.2022 ರಂದು ವಿಠ್ಠಲ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ ರಸಪ್ರಶ್ನೆ ಸ್ಪರ್ಧೆಯ ವಿಜೇತರಿಗೆ ಶ್ರೀರಾಮ ಪದವಿಯ ಬಿಎಸ್‌ಸಿ ವಿಭಾಗದಿಂದ ಪ್ರಶಸ್ತಿ ಪತ್ರ ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ವಿಠ್ಠಲ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಆದರ್ಶ ಚೊಕ್ಕಾಡಿ, ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕಿಯಾದ ಶ್ರೀಮತಿ ರೂಪ, ಶ್ರೀರಾಮ ಪದವಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಬಿಎಸ್ಸಿ ವಿಭಾಗದ ಉಪನ್ಯಾಸಕಿ ಯರಾದ ಶ್ರೀಮತಿ ಕವಿತಾ ಮಾತಾಜಿ, ಶ್ರೀಮತಿ ಅಖಿಲ ಮಾತಾಜಿ, ವಿದ್ಯಾರ್ಥಿಗಳಾದ ಜೈದೀಪ್, ಅಂಕಿತಾ, ಅರ್ಪಿತಾ ಉಪಸ್ಥಿತರಿದ್ದರು.

**ಕಾಲೇಜು ಭೇಟಿ. 24.03.22**

ವಿಠ್ಠಲ ಪದವಿ ಪೂರ್ವ ಕಾಲೇಜಿ ನ ಕಲಾ ವಿಭಾಗದ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ನಮ್ಮ ಕಾಲೇಜಿನ ವಿಶೇಷತೆಯ ಬಗ್ಗೆ ತಿಳಿಸಿ ಕೊಡಲಾಯಿತು. ಜಯಲಕ್ಷ್ಮಿ ರಾಜ್ಯಶಾಸ್ತ್ರ ಉಪನ್ಯಾಸಕರು, ಗಂಧರ್ವ ಇತಿಹಾಸ ಉಪನ್ಯಾಸಕರು, ಸಂಧ್ಯಾ ಅರ್ಥಶಾಸ್ತ್ರ ಉಪನ್ಯಾಸಕರು ಉಪಸ್ಥಿತರಿದ್ದರು.

**NSS ವೆಬಿನಾರ್‌ನಲ್ಲಿ ಭಾಗಿ 30.03.22**

ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಪ್ರಕೋಷ್ಠ ವತಿಯಿಂದ ಆನ್ಲೈನ್ ವೆಬಿನಾರ್ ನಡೆಯಿತು. ಈ ಕಾರ್ಯಕ್ರಮದಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಸಾಂಸ್ಕೃತಿಕ ಸ್ಪರ್ಧೆ 09.03.22**

ಸಾಂಸ್ಕೃತಿಕ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಸ್ಪರ್ಧೆಗಳ ವಿವರ ಹೀಗಿವೆ – ಕನ್ನಡ ಭಾಷಣ, ಕನ್ನಡ ಗೀತೆ, ಮುಖ ವರ್ಣಿಕೆ, ಮಣ್ಣಿನ ಆಕೃತಿ, ಕಥೆ ಹೇಳುವುದು, ಗೂಡು ದೀಪ, ಪೇಪರ್ ಆಕೃತಿ, ರಾಷ್ಟ್ರಾರ್ಪಣಮ್, ಆಲ್ ಇನ್ ವನ್ ಮಾಗಜೀನ್, ಭಕ್ತಿಗೀತೆ, ಮಂಗಳವಾದ್ಯ ಘೋಷ್.





ಪ್ರತಿಭಾ ದಿನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಡಾ. ಸಿಂಧುಶ್ರೀ ಬಳ್ಳಕ್ಕುರಾಯ, ಸ್ಟಾರ್ ಗ್ರೂಪ್ ಮಾಲಕರಾದ ಶ್ರೀ ಜಯಪ್ರಶಾಂತ್ ದಂಪತಿಗಳು, ಮುಖ್ಯೋಪಾಧ್ಯಾಯರಾದ ಶಾಂಭವಿ ಮಾತಾಜಿ, ಶ್ರೀಮತಿ ಲಕ್ಷ್ಮೀ ರಘುರಾಜ್ ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು. ನಂತರ ನಡೆದ ನೃತ್ಯ ಕಾರ್ಯಕ್ರಮದಲ್ಲಿ ಡಾ। ಪ್ರಭಾಕರ್ ಭಟ್ ಉಪಸ್ಥಿತರಿದ್ದರು.



ಚಿಣ್ಣರ – ಚಿತ್ತಾರ (31.03.2022) ಬೇಸಿಗೆ ಶಿಬಿರದ ಅಂಗವಾಗಿ ಶ್ರೀ ಕೃಷ್ಣ ಬ್ರಿಕ್ಸ್ & ಟೈಲ್ಸ್, ಮತ್ತು ಇಕೋ ಬ್ಲಿಸ್ಸ್ ಕಂಪೆನಿಗೆ ಭೇಟಿ ನೀಡಿ ಕೈಗಾರಿಕಾ ಪ್ರಾಂಗಣ ವೀಕ್ಷಿಸಿದರು.

## ಪದವಿಪೂರ್ವ





ಪ್ರೌಢ ಶಾಲೆಗಳ ಭೇಟಿ: 03.03.22ರಂದು ಮಂಚಿ, ಸಾಲೆತ್ತೂರು, ಪ್ರಗತಿ ಕುಕ್ಕಾಜೆ ಹೈಸ್ಕೂಲ್, ದಿನಾಂಕ 04.03.22ರಂದು ಮಡಿಕೇರಿ, ಕುಶಾಲನಗರ, ಸೋಮವಾರಪೇಟೆಯ ಹೈಸ್ಕೂಲ್, 07.03.22ರಂದು ಶೃಂಗೇರಿ, ಕಳಸ ತಾಲೂಕಿನ ಹೈಸ್ಕೂಲ್‌ಗಳಿಗೆ ಶ್ರೀಮಾನ್‌ಗಳಾದ ಶ್ರೀ ಕರುಣಾಕರ, ಶ್ರೀ ಲಕ್ಷ್ಮೀಶ ಶ್ರೀಮಾನ್ ಮತ್ತು ಶ್ರೀ ಅಭಿಲಾಷ್, ಶ್ರೀ ಗಿರೀಶ್ ಭೇಟಿ ನೀಡಿ ಪದವಿಪೂರ್ವ ಕಾಲೇಜಿನ ಬಗ್ಗೆ ಮಾಹಿತಿ ನೀಡಿದರು.



14.03.22 ವಿದ್ಯಾರ್ಥಿನಿಯರ, ಹದಿಹರೆಯದ ಸಮಸ್ಯೆಗಳು – ಕೈಗೊಳ್ಳಬೇಕಾದ ಕ್ರಮ, ಆಹಾರ ಪದ್ಧತಿಯ ಬಗ್ಗೆ ಪ್ರಾ.ಆ.ಕೇಂದ್ರ ಬಾಳ್ತಿಲದ ವೈದ್ಯಾಧಿಕಾರಿ ಡಾ. ರೋಶನಿ ಪೂಂಜಾ ಮಾಹಿತಿ ನೀಡಿದರು. ಹಿ. ಆರೋಗ್ಯ ಸಹಾಯಕಿ ಶ್ರೀಮತಿ ಮರಿಯ ಕುಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಆರೋಗ್ಯ ನಿಧಿ ಸಹಾಯ: 31.03.2022ರಂದು ಪ್ರತಿಭಾನ್ವಿತ ಕ್ರೀಡಾಪಟು ಭವನ್ ಕಡೇಶಿವಾಲಯ ಕ್ರೀಡಾಕೂಟದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಕೈಮುರಿತಕ್ಕೆ ಒಳಗಾಗಿ ಮಂಗಳೂರಿನ A. J. Hospitalನಲ್ಲಿ ಚಿಕಿತ್ಸೆ ಪಡೆದಿದ್ದು, ಸಂಪೂರ್ಣ ವೆಚ್ಚವನ್ನು ವಿದ್ಯಾಕೇಂದ್ರ ಭರಿಸಿದೆ.






**ಪ್ರತಿಭಾ ಪುರಸ್ಕಾರ** ದಿನಾಂಕ 09.03.22 ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಅವರು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರಾದ ಶ್ರೀನಾಗೇಶ್ ಕಲ್ಲಡ್ಕ, ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷರು , ಕೃಷಿಕರು ಆದ ಶ್ರೀ ಶ್ಯಾಮ ಸುಬ್ರಹ್ಮಣ್ಯ ಭಟ್, ಗುತ್ತಿಗೆದಾರರು, ಶಿಕ್ಷಕ ರಕ್ಷಕ ಸಂಘದ ಉಪಾಧ್ಯಕ್ಷರು ಆದ ಶ್ರೀ ನಾಗೇಶ ಬೊಂಡಾಲ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಪದವಿ



**08.03.22 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಲ್ಲಡ್ಕದ ಕೆ.ಟಿ ಹೋಟೆಲ್‌ನ ಮಾಲಕಿಯಾದ ಶ್ರೀಮತಿ ಪದ್ಮಾವತಿ ಉದ್ಘಾಟಿಸಿ ಮಾತನಾಡಿದರು. ಶ್ರೀಮತಿ ಲಕ್ಷ್ಮಿ ರಘುರಾಜ್, ಶ್ರೀಮತಿ ಸುಹಾಸಿನಿ ಜಯಪ್ರಶಾಂತ ಮಹಿಳಾ ಘಟಕದ ಸಂಯೋಜಕರು ಉಪಸ್ಥಿತರಿದ್ದರು.**




**ವಿಡಿಯೋ ಪ್ರದರ್ಶನ 12.03.22 ಎನ್. ಎಸ್.ಎಸ್ ಸ್ವಯಂಸೇವಕರಿಗೆ ಸಾಮಾಜಿಕ ಜಾಗೃತಿಯ ಪ್ರೇರಣಾತ್ಮಕ ವಿಡಿಯೋಗಳನ್ನು ತೋರಿಸಿ ಅವಲೋಕನ ನಡೆಸಲಾಯಿತು. ಯೋಜನಾಧಿಕಾರಿ ಯತಿರಾಜ್ ಪಿ ಮತ್ತು ಕು. ದೀಕ್ಷಿತಾ , ಶ್ರೀಮತಿ ಸ್ವರ್ಣಗೌರಿ ಉಪಸ್ಥಿತರಿದ್ದರು.**



**26.03.22 ಯಶಸ್ಸಿನ ಹಾದಿಯಲ್ಲಿ ಯಶಸ್ವಿ: ಅಂತರ್ ವಿ.ವಿ ಮಟ್ಟದ ಚೆಸ್ ಪಂದ್ಯಾಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ತಂಡದಲ್ಲಿ ಆಯ್ಕೆಯಾಗಿರುವ ನಮ್ಮ ಕಾಲೇಜಿನ ಪ್ರಥಮ ಬಿ.ಸಿ.ಎ ವಿದ್ಯಾರ್ಥಿನಿ ಕು. ಯಶಸ್ವಿ ಕೆ ಇವರು ಪೂರ್ವಭಾವಿ ಚೆಸ್ ತರಬೇತಿ ಶಿಬಿರದಲ್ಲಿ ಬಾಗವಹಿಸಿದರು.**








**05.03.22** ಸಾಗರಸಂಗಮ–ಕಡಲ ಕಿನಾರೆ ಹಬ್ಬ : ಸಾಗರಸಂಗಮ ಎನ್ನುವ ಹೆಸರಿನಲ್ಲಿ ಆಯೋಜಿಸಲಾದ ಒಂದು ದಿನದ ಕಡಲ ಕಿನಾರೆಯಲ್ಲಿ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಹಬ್ಬ ಮಂಗಳೂರಿನ ತಣ್ಣೀರು ಬಾವಿ ಕಡಲ ಕಿನಾರೆಯಲ್ಲಿ ನಡೆಯಿತು. ಕಾರ್ಯಕ್ರಮವನ್ನು MRPLನ Training ವಿಭಾಗದ DGM ಶ್ರೀಮತಿ ವೀಣಾ ಶೆಟ್ಟಿ ಸಮುದ್ರಕ್ಕೆ ಬಾಗಿನ ಸಮರ್ಪಿಸಿ ಉದ್ಘಾಟಿಸಿದರು. ಪ್ರತಾಪನಗರದ ಮಾನ್ಯ ಸಂಘಚಾಲಕ ಮತ್ತು ನ್ಯಾಯವಾದಿ ಶ್ರೀ ಕೇಶವ ನಂದೋಡಿ ಹಾಗೂ ವೈದ್ಯ ರಾದ ಶ್ರೀ ದಯಾಶಂಕರ ಮೊಹಾಂತಿ (ಒರಿಸ್ಸಾ) ಮತ್ತಿತರರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಗಾಳಿಪಟ ತಯಾರಿ, ಮರಳು ಶಿಲ್ಪ, ಕಪ್ಪೆ ಚಿಪ್ಪಿನ ಆಕೃತಿ, ಹಿಮ್ಮುಖ ಓಟ, ಹಗ್ಗ ಜಗ್ಗಾಟ, ಹುಲಿದನ, ಲಿಂಬೆ ಚಮಚ, ಕವನ ರಚನೆ, ಸಾಮೂಹಿಕ ಸಹ ಭೋಜನ ಮುಂತಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ವಿದ್ಯಾಕೇಂದ್ರದ ಎಲ್ಲಾ ಬೋಧಕ – ಬೋಧಕೇತರ ಸಿಬ್ಬಂದಿಗಳ ಪರಿಚಯಾತ್ಮಕ ಬೈಠಕ್ 09.03.22ರಂದು ವಿದ್ಯಾಕೇಂದ್ರದ ಪ್ರಾಥಮಿಕ ಶಾಲೆಯ ವೇದವ್ಯಾಸ ಧ್ಯಾನ ಮಂದಿರದಲ್ಲಿ ನಡೆಯಿತು. ವಿದ್ಯಾಕೇಂದ್ರದ ಆಡಳಿತ ಮಂಡಳಿ ಎಲ್ಲಾ ಸದಸ್ಯರು, ಅಭಿವೃದ್ಧಿ ಸಮಿತಿ, ಮಾತೃಭಾರತಿ ಸದಸ್ಯರು ಪಾಲ್ಗೊಂಡಿದ್ದರು.









ಪ್ರೌಢಶಾಲಾ ವಿಭಾಗದ ಪ್ರತಿಭಾ ದಿನೋತ್ಸದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಚಿತ್ರ ನೋಟ. 7.03.2022

ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ
ರಾಮ ನಗರ ಶಾಖೆಯಲ್ಲಿ
E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ,
ಮಾಜಿ ಯೋಧರಿಗೆ ಮತ್ತು
ವಿಧವೆಯರಿಗೆ 0.5%
ಬಡ್ಡಿ ಹೆಚ್ಚಿಗೆ ನೀಡಲಾಗುವುದು

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 8 Issue : 11 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363